**ದಿನಾಂಕಃ 27-04-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ ಎಂ.ಎಸ್.ಬಿ. ವಕೀಲರಿಂದಃ**

ವಿಮೆ ಪಾಲಿಸಿಯ Designing and software ನಮ್ಮ ವಿಮೆ ಸಂಸ್ಥೆಯ ನಿಯಂತ್ರಣದಲ್ಲಿ ಇರುತ್ತದೆ ಎಂದರೆ ಸರಿ. ಸದರಿ software ನ್ನು ಕಾಲ-ಕಾಲಕ್ಕೆ Update ಮಾಡಲಾಗುತ್ತದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ . ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಆರ್-4 ರ ವಿಮೆ ಪಾಲಿಸಿ Updated Copy ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಆರ್-4 ರ ವಿಮೆ ಪಾಲಿಸಿಯನ್ನು 2 ನೇ ಎದುರುದಾರ ಈ ಮೊದಲು Package Policy ಯ ಹೆಸರಿನಲ್ಲಿ ನೀಡುತ್ತಿತ್ತು ಎಂದರೆ ಸರಿಯಲ್ಲ. 1 ನೇ ಎದುರುದಾರನಿಗೆ ನಾವು ನೀಡಿರುವ ವಿಮೆ ಪಾಲಿಸಿಯಲ್ಲಿ ಪ್ಯಾಕೇಜ್ ಪಾಲಿಸಿ ಎಂದು ನಮೂದಿಸಿದ್ದೇವೆ ಆದರೆ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಆರ್-4 ರ ವಿಮೆ ಪಾಲಿಸಿಯನ್ನು Update ಮಾಡಿ ಬಂಡಲ್

ಪಾಲಿಸಿ ಎಂದು ನಮೂದಿಸಿ ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಆರ್‌-4 ರ ವಿಮೆ ಪಾಲಿಸಿಯು English ಭಾಷೆಯಲ್ಲಿ ಇದೆ ಎಂದರೆ ಸರಿ. ಸದರಿ ವಿಮೆ ಪಾಲಿಸಿಯ ಷರತ್ತುಗಳು English ಭಾಷೆಯಲ್ಲಿ ಮುದ್ರಿತವಾಗಿರುವ ಕಾರಣಕ್ಕಾಗಿ ಅರ್ಜಿದಾರರು ಕೇವಲ ಕನ್ನಡ ಭಾಷೆ ಬಲ್ಲವರು ಆಗಿರುವ ಕಾರಣಕ್ಕಾಗಿ ಸದರಿ ವಿಮೆ ಪಾಲಿಸಿಯ ಷರತ್ತುಗಳ ಬಗ್ಗೆ ಅರ್ಜಿದಾರರಿಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಮೆಯು 5 ವರ್ಷಗಳ ಅವಧಿಯ ಪ್ಯಾಕೇಜ್ ಪಾಲಿಸಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನಿ.ಆರ್‌-4 ರ ವಿಮೆ ಪಾಲಿಸಿಯು ಟಿ.ಪಿ.ಕವರೇಜ್ ಹೊಂದಿರುತ್ತದೆ ಎಂದರೆ ಸರಿ. ಸದರಿ ನಿ.ಆರ್‌-4 ರ ವಿಮೆ ಪಾಲಿಸಿಯಲ್ಲಿ ಕೇವಲ ಓ.ಡಿ.ಕವರೇಜ್ ಇರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸದರಿ ಪಾಲಿಸಿಯಲ್ಲಿ ಕೇವಲ ಒಂದು ವರ್ಷದ ಅವಧಿಗೆ ಮಾತ್ರ ಓ.ಡಿ. ಕವರೇಜ್ ಇರುತ್ತದೆ ಎಂದು ನುಡಿಯುತ್ತಾರೆ . ರಸ್ತೆಯ ಮೇಲೆ ನಡೆದು ಹೋಗುತ್ತಿರುವ ಪಾದಚಾರಿಗಳು ಮತ್ತು ಸದರಿ ಮೋಟಾರ್ ಸೈಕಲ್ ನ ಹಿಂಬದಿ ಸವಾರ ರವರು 3rd Party ಆಗುತ್ತಾರೆ

ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕೇವಲ ಪಾದಚಾರಿಗಳು ಮಾತ್ರ 3rd Party ಆಗಿರುತ್ತಾರೆ ಸದರಿ ಬೈಕ್ ನ ಹಿಂಬದಿ ಸವಾರ 3rd Party ಆಗುವುದಿಲ್ಲ ಎಂದು ನುಡಿಯುತ್ತಾರೆ . ನಮ್ಮ ಸಂಸ್ಥೆಯ ವಿಮೆಯ ಷರತ್ತುಗಳ ಪ್ರಕಾರ 1) Occupant of the vehicle, 2) Pillion Rider, 3) Insurer ರವರನ್ನು ಹೊರತುಪಡಿಸಿ ಉಳಿದವರೆಲ್ಲರೂ 3rd Party ಆಗಿರುತ್ತಾರೆ. ವಿಮಾ ಪಾಲಿಸಿಯ Insured and Insurer ರವರನ್ನು ಹೊರತುಪಡಿಸಿ ಉಳಿದವರೆಲ್ಲರೂ 3rd Party ಆಗುತ್ತಾರೆ ಎಂದರೆ ಸರಿಯಲ್ಲ. Pillion Rider 3rd party ಆಗಿದ್ದರೂ ಸಹ ನಮ್ಮ ಸಂಸ್ಥೆ ಭಾಧ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ Pillion Rider 3rd party ಆಗುವುದಿಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ವರ್ಷಗಳ ಬಂಡಲ್ ಪಾಲಿಸಿಯಲ್ಲಿ ಕೇವಲ ಒಂದು ವರ್ಷ ಮಾತ್ರ ಓ.ಡಿ.ಕವರೇಜ್ ಇರುವ ಪಾಲಿಸಿಯ ವಾಹನಗಳಿಗೆ ಬೇರೆ ವಿಮಾ ಸಂಸ್ಥೆಯಲ್ಲಿ ವಿಮೆ ಮಾಡಿಸಿದರೆ ಸದರಿ ಬೇರೆ ವಿಮಾ ಸಂಸ್ಥೆಯವರು ಕೇವಲ ಓ.ಡಿ.ಕವರೇಜ್ ನ ಪಾಲಿಸಿಯನ್ನು ನೀಡುತ್ತಾರೆ

ಮತ್ತು ಉಳಿದ 4 ವರ್ಷಗಳಿಗೆ ಸಂಬಂಧಪಟ್ಟ ವಿಮೆಯ ಪಾಲಿಸಿಗಳ ಪ್ರಕಾರ Pillion Rider 3rd Party ಯಲ್ಲಿ ಬರುತ್ತಾರೆ ಎಂದು ಮಾಹಿತಿಯನ್ನು ನೀಡಿರುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. H.D.F.C. Argo General Insurance Company and Sriram General Insurance Company ಯ ಪಾಲಿಸಿಗಳ ಪ್ರಕಾರ 5 ವರ್ಷಗಳ ಬಂಡಲ್ ಪಾಲಿಸಿಯನ್ನು ಒಂದು ವರ್ಷದವರೆಗೆ ಮಾತ್ರ ಓ.ಡಿ.ಕವರೇಜ್ ನ್ನು ನೀಡಿರುತ್ತಾರೆ ಎನ್ನುವ ಬಗ್ಗೆ ನಿಮ್ಮ ವಿಮಾ ಸಂಸ್ಥೆಯ ಪ್ರಕಾರ ಓ.ಡಿ.ಕವರೇಜ್ ಮಾತ್ರ ನೀಡಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2 ನೇ ಎದುರುದಾರ ವಿಮಾ ಸಂಸ್ಥೆಯ ನಿಯಮಗಳ ಬಗ್ಗೆ ಮಾತ್ರ ತನಗೆ ಗೊತ್ತಿದೆ ಉಳಿದ ವಿಮಾ ಸಂಸ್ಥೆಗಳ ಕರಾರು ಮತ್ತು ಷರತ್ತುಗಳ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ .

ನಾನು ಈ ಅರ್ಜಿಗೆ ಸಂಬಂಧಪಟ್ಟ ಪೋಲಿಸ್ ದಾಖಲೆಗಳನ್ನು ನೋಡಿದ್ದೇನೆ ಮತ್ತು ಅವುಗಳ ಆಧಾರದ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಸದರಿ ಪೋಲಿಸ್ ದಾಖಲಾತಿಗಳ

ಪ್ರಕಾರ Pillion Rider and Rider ಹೆಲ್ಮೆಟ್ ಧರಿಸಿರಲಿಲ್ಲ ಎನ್ನುವ ಬಗ್ಗೆ ಎಲ್ಲಿಯೂ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ಸದರಿ Pillion Rider ವಿಕಲಚೇತನನಾಗಿದ್ದ ಎನ್ನುವ ಬಗ್ಗೆಯೂ ಸಹ ಸದರಿ ಪೋಲಿಸ್ ದಾಖಲೆಗಳಲ್ಲಿ ಎಲ್ಲಿಯೂ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ವಿಕಲಚೇತನ ವ್ಯಕ್ತಿಗಳಿಗೆ ಸರ್ಕಾರವು ವಿಕಲಚೇತನ ಕೋಟಾದ ಅಡಿಯಲ್ಲಿ ನೇಮಕಾತಿಯನ್ನು ಮಾಡಿಕೊಂಡು ಸಂಬಳವನ್ನೂ ಸಹ ನೀಡುತ್ತದೆ ಎಂದರೆ ಸರಿ.

1 ನೇ ಎದುರುದಾರನಿಗೆ ಸದರಿ ಅಪಘಾತದ ಸಮಯದಲ್ಲಿ ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇತ್ತು ಮತ್ತು 1 ನೇ ಎದುರುದಾರ ಸದರಿ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾನೆ ಎಂದರೆ ಸರಿಯಲ್ಲ. 1 ನೇ ಎದುರುದಾರನಿಗೆ ಸದರಿ ಅಪಘಾತದ ಸಮಯದಲ್ಲಿ ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಇತ್ತು ಮತ್ತು ಆತನ ಮಾಲೀಕತ್ವದ ವಾಹನಕ್ಕೆ ಸೂಕ್ತ ವಿಮೆಯೂ ಸಹ ಇತ್ತು ಎನ್ನುವ ಕಾರಣಕ್ಕಾಗಿ ಸದರಿ ಅಪಘಾತದಲ್ಲಿ ಮರಣ ಹೊಂದಿದ ಹಿಂಬದಿ

ಸವಾರನ ವಾರಸುದಾರರಿಗೆ ಮತ್ತು ಸದರಿ ಅಪಘಾತದಲ್ಲಿ ಪಾದಚಾರಿಗೆ ಆದ ಗಾಯಗಳಿಗೆ ನಮ್ಮ ವಿಮಾ ಸಂಸ್ಥೆಯೇ ಪರಿಹಾರ ಮೊತ್ತ ನೀಡಲು ಬಾಧ್ಯಸ್ಥವಾಗಿರುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ನೇ ಎದುರುದಾರರ ಪರ ವಕೀಲರಾದ ಶ್ರೀ ಎಂ.ಎಂ.ಎಲ್. ವಕೀಲರು ಅರ್ಜಿದಾರರ ಪರ ವಕೀಲರ ಪಾಟೀ ಸವಾಲನ್ನೇ ಅನುಮೋದಿಸಿಕೊಳ್ಳಲು ಕೋರಿರುತ್ತಾರೆ, ಮನವಿಯನ್ನು ಅಂಗೀಕರಿಸಲಾಗಿದೆ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.